**ಓ ಎಸ್ ನಂಃ 194/2020**
**ಪಿ ಡಬ್ಲ್ಯೂ ಃ 1**

**ದಿಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ-**

ದಾವಾ ಸ್ವತ್ತಿನ ಚಕ್ಕುಬಂದಿ ತಮಗೆ ಹೇಳಲು ಬರುತ್ತದ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವದ ಕಡೆ ನಂಜುಂಡಪ್ಪನವರ ಜಮೀನು, ಪಶ್ಚಿಮದ ಕಡೆ ಜಯರಾಮ ಶೆಟ್ಟಿರವರ ಜಮೀನು, ಉತ್ತರಕ್ಕೆ ನನಗೆ ಗೊತ್ತಿಲ್ಲ, ದಕ್ಷಿಣಕ್ಕೆ ಲಕ್ಷ್ಮೀದೇವಮ್ಮ ನವರ ಉಳಿಕೆ ಜಮೀನು. ದಾವಾ ಸ್ವತ್ತಿನ ಉತ್ತರದ ಕಡೆ ಸರ್ವೆ ನಂ. 57 ಮತ್ತು 45 ರ ಜಮೀನುಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣದ ಕಡೆ ಲಕ್ಷ್ಮೀದೇವಮ್ಮ ನವರ ಜಮೀನು ಬರುವುದಿಲ್ಲ ಆದರೆ ರಂಗನರಸಿಂಹಯ್ಯನವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 46/2 ರಲ್ಲಿ 2 ಎಕರೆ 20 ಗುಂಟೆ ಮತ್ತು ಸರ್ವೆ ನಂ. 46/4 ರಲ್ಲಿ 2 ಎಕರೆ 20 ಗುಂಟೆ ಜಮೀನು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಯು ಸ್ವಾ ಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ. 46 ನ್ನು ಎ ಡಿ ಎಲ್ ಆರ್ ಆದೇಶದ ಮೇರೆಗೆ ದುರಸ್ತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಅಳತೆ ಕಾರ್ಯವನ್ನು ತಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**